# ಕುವೆಂಪು ವಿಶ್ವವಿದ್ಯಾಲಯ

## ವಿದ್ಯಾರ್ಥಿ ಆಪ್ತ ಸಮಾಲೋಚನಾ ಮತ್ತು ಮಾರ್ಗದರ್ಶನ ಕೇಂದ್ರ

ಸಂಖ್ಯೆ: ಆ.ಕೇ: ಕುವಿ: 26 :2019–20 ದಿನಾಂಕ: 03.05.2019

**ಸುತ್ತೋಲೆ**

**ವಿಷಯ: ಮಕ್ಕಳ ಬೇಸಿಗೆ ಶಿಬಿರ 2019ನ್ನು ಆಯೋಜಿಸುತ್ತಿರುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ಕೇಂದ್ರದಲ್ಲಿರುವ ವಿದ್ಯಾರ್ಥಿ ಆಪ್ತ ಸಮಾಲೋಚನಾ ಮತ್ತು ಮಾರ್ಗದರ್ಶನ ಕೇಂದ್ರದ ವತಿಯಿಂದ ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುವ ಎಲ್ಲಾ ವರ್ಗದ ಸಿಬ್ಬಂದಿಗಳ ಮಕ್ಕಳಿಗಾಗಿ ಉಚಿತ ಬೇಸಿಗೆ ಶಿಬಿರವನ್ನು ಆಯೋಜಿಸಲು ನಿರ್ಧರಿಸಲಾಗಿದೆ ಹಾಗೂ ಸಿಬ್ಬಂದಿಗಳಲ್ಲದವರ (Outsider)ಮಕ್ಕಳಿಗೂ ಸಹ ಶಿಬಿರದಲ್ಲಿ ಭಾಗವಹಿಸಲು ಅವಕಾಶವನ್ನು ನೀಡಲಾಗಿದೆ. ಆಸಕ್ತ ಸಿಬ್ಬಂದಿ ವರ್ಗದವರು ತಮ್ಮ ಮಕ್ಕಳನ್ನು ಬೇಸಿಗೆ ಶಿಬಿರಕ್ಕೆ ಸೇರಿಸಲು ನಿಗಧಿ ಪಡಿಸಿರುವ ದಿನಾಂಕ ದೊಳಗೆ ಹೆಸರನ್ನು ನೊಂದಾಯಿಸಬೇಕಾಗಿ ಕೋರಲಾಗಿದೆ.

**ಶಿಬಿರದ ವಿಶೇಷತೆಗಳು:** ವ್ಯಕ್ತಿತ್ವ ವಿಕಸನಕ್ಕಾಗಿ, ಮೌಲ್ಯ ಜೀವನ ಕೌಶಲ್ಯಗಳ ಕುರಿತು ಮಾಹಿತಿ, ಚಿತ್ರಕಲೆ/ಕರಕುಶಲ ವಸ್ತುಗಳ ತಯಾರಿಕಾ ತರಬೇತಿ, ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯಕ್ಕಾಗಿ ವ್ಯಾಯಾಮ, ಯೋಗ, ಎರೋಬಿಕ್ಸ್ ಅಭ್ಯಾಸ, ಮಕ್ಕಳಲ್ಲಿನ ಏಕಾಗ್ರತೆ ಮತ್ತು ಜ್ಞಾಪಕ ಶಕ್ತಿಯ ವೃದ್ಧಿಗಾಗಿ ಧ್ಯಾನ ಹಾಗೂ ಮುದ್ರೆಗಳ ತರಬೇತಿ, ಹಾಡು, ನೃತ್ಯ ಮತ್ತು ತರಬೇತಿ, ಮನೋರಂಜನಾ ಆಟಗಳು, ವಿವಿಧ ಕ್ರೀಡೆಗಳು, ಮಕ್ಕಳ ಕಿರುಚಿತ್ರಗಳ ಪ್ರದರ್ಶನ, ಟ್ರಕ್ಕಿಂಗ್ ಹಾಗೂ ಫೈರ್ ಕ್ಯಾಂಪ್ ಇತ್ಯಾದಿ.

**ಸೂಚನೆಗಳು:**

- ಶಿಬಿರದಲ್ಲಿ 08 ರಿಂದ 16 ವರ್ಷದ ಒಳಗಿನ ಮಕ್ಕಳು ಭಾಗವಹಿಸಬಹುದು
- ಶಿಬಿರದಲ್ಲಿ ತಜ್ಞರು ಹಾಗೂ ಪರಿಣಿತ ಸಂಪನ್ಮೂಲ ವ್ಯಕ್ತಿಗಳು ಮಾಹಿತಿ ಹಾಗೂ ತರಬೇತಿ ನೀಡುವರು
- ಶಿಬಿರದ ಅವಧಿ ಒಂದುವಾರ. ದಿನಾಂಕ: 13 ರಿಂದ 20 ಮೇ, 2019ರ ವರೆಗೆ
- ಶಿಬಿರದ ಸಮಯ ಪ್ರತಿ ದಿನ ಬೆಳಗ್ಗೆ: 9:30 ರಿಂದ ಸಂಜೆ 4: ಗಂಟೆವರೆಗೆ
- ಶಿಬಿರದ ಸ್ಥಳ ಕುವೆಂಪು ವಿಶ್ವವಿದ್ಯಾಲಯದ ಆವರಣ
- ಮೊದಲು ನೊಂದಾಯಿಸಿಕೊಂಡ 70 ಮಕ್ಕಳಿಗೆ ಮಾತ್ರ ಅವಕಾಶವಿರುತ್ತದೆ
- ವಿ. ವಿಯ ಸಿಬ್ಬಂದಿ ವರ್ಗದ ಮಕ್ಕಳಿಗೆ ಯಾವುದೇ ಶುಲ್ಕ ಇರುವುದಿಲ್ಲ
- ಶಿಬಿರದಲ್ಲಿ ಭಾಗವಹಿಸಲು ಇಚ್ಚಿಸುವ ಸಿಬ್ಬಂದಿಗಳಲ್ಲದವರ(Outsider)ಮಕ್ಕಳಿಗೆ **ನಿಯಮಿತ ಶುಲ್ಕ ಅನ್ವಯಿಸುತ್ತದೆ**
- ಶಿಬಿರಕ್ಕೆ ಹೆಸರು ನೊಂದಾಯಿಸಲು ಕೊನೆಯ ದಿನಾಂಕ: 08. ಮೇ, 2019.

**ಶಿಬಿರಕ್ಕೆ ಹೆಸರು ನೊಂದಾಯಿಸಲು ಸಂಪರ್ಕಿಸಿ:**

**ಕು. ರಜನಿ ಎಸ್.ಡಿ.**
ಆಪ್ತ ಸಮಾಲೋಚಕರು
ಆರೋಗ್ಯ ಕೇಂದ್ರ, ಕೊಠಡಿ ಸಂಖ್ಯೆ–10.
ಮೊಬೈಲ್ ನಂ. **7625031861/9591937081.**

ವೈದ್ಯಾಧಿಕಾರಿಗಳು
ಆರೋಗ್ಯ ಕೇಂದ್ರ,
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ.